ಇಂದು ದಿನಾಂಕ:04.01.2024 ರಂದು ಪಿಡಬ್ಲ್ಯೂ:1 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು:</u>** ಜೆಡಿಆರ್ ರವರ ಪರ ಶ್ರೀ ಕೆ.ಎಂ.ಪಿ. ವಕೀಲರಿಂದ:

1. ಯಾವ ದಿನಾಂಕದ ವ್ಯಾಜ್ಯ ಕಾರಣದ ಮೇಲೆ ಈ ಅರ್ಜ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ನನಗೆ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಡಿಕ್ರಿ ಷಡ್ಯೂಲ್ ಸರ್ವೆ ನಂಬರಿನ ಒಟ್ಟು ವಿಸ್ತೀರ್ಣ 31 ಗುಂಟೆ ಎಂದರೆ ಸರಿ. ಸರ್ವೆ ನಂ.215 ಪಕ್ಕಾ ಪೋಡಿಯಾಗಿಲ್ಲ ಎಂದರೆ ಸರಿ. ಸರ್ವೆ ನಂ.215 ರ 31 ಗುಂಟೆಯಲ್ಲಿ ಪೂರ್ವ ದಿಕ್ಕಿನ 15 ಗುಂಟೆ ಆಸ್ತಿಯನ್ನು ನಾನು ಖರೀದಿಸಿದ್ದೇನೆ ಎಂದರೆ ಸಾಕ್ಷಿಯು ಪಶ್ಚಿಮ 15 ಗುಂಟೆ ಆಸ್ತಿಯನ್ನು ಖರೀದಿಸಿದ್ದೇನೆ ಎಂದು ನುಡಿಯುತ್ತಾರೆ. ಉಳಿಕೆ ಆಸ್ತಿಯನ್ನು ಜೆಡಿಆರ್ ಖರೀದಿಸಿದ್ದಾರೆ ಎಂದರೆ ಸಾಕ್ಷಿಯು 11 ಗುಂಟೆ ಆಸ್ತಿ ಮತ್ತು 5 ಗುಂಟೆ ಖರಾಬನ್ನು ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ಡಿಕ್ರಿ ಷೆಡ್ಯೂಲ್ ಸರ್ವೆ ನಂಬರಿನಲ್ಲಿ ಒಟ್ಟು 10 ಗುಂಟೆ ಖರಾಬು ಇದೆ ಎಂದರೆ ಸಾಕ್ಷಿಯು 5 ಗುಂಟೆ ಖರಾಬು ಇದೆ ಎಂದು ನುಡಿಯುತ್ತಾರೆ. ಯಾವ ಉದ್ದೇಶಕ್ಕೆ ಆ ಖರಾಬು ಇದೆ ಎಂದರೆ ನನಗೆ ಗೊತ್ತಿಲ್ಲ.

2. ನಾನು ಜೆಡಿಆರ್ ರವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ, ಈ ಅರ್ಜಿಯನ್ನು ಸಲ್ಲಿಸಲು ವ್ಯಾಜ್ಯ ಕಾರಣ ಉಂಟಾಗದಿದ್ದರೂ ಸಹ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಕೇಳಿರುವ ಖರ್ಚಸನ್ನು ಪಡೆದುಕೊಳ್ಳಲು ನಾನು ಭಾದ್ಯಸ್ಥನಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂ.233/1994 ರಲ್ಲಿ ನೀಡಿರುವ ತೀರ್ಪಿನ ಅನ್ವಯ ಯಾವುದೇ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಸುಳ್ಳು ಅರ್ಜಿಯನ್ನು ಸಲ್ಲಿಸಿ, ಅದಕ್ಕನುಗುಣವಾಗಿ ಸುಳ್ಳು ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಡಿಕ್ರಿ ಷೆಡ್ಯೂಲ್ ಸರ್ವೆ ನಂಬರಿನಲ್ಲಿ 6 ಕೊಠಡಿಗಳುಳ್ಳ ಒಂದು ಕಟ್ಟಡ ಇದೆ ಎಂದರೆ ಈಗ ಇಲ್ಲ ಎಂದು ನುಡಿಯುತ್ತಾರೆ. ನನ್ನ ಕ್ರಯ ಪತ್ರದಲ್ಲಿ ಕಟ್ಟಡವನ್ನು ಸೇರಿ ಕ್ರಯ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಕ್ರಯಪತ್ರದಲ್ಲಿ 3 ಕೊಠಡಿಗಳು ಇರುವ ಕಟ್ಟಡ ನನ್ನ ಪಾಲಿಗೆ ಎಂದು ನಮೂದು ಇದೆ ಎಂದರೆ ಸರಿ. ಉಳಿಕೆ 3 ಕೊಠಡಿಗಳು ಇರುವ ಕಟ್ಟಡ ಜೆಡಿಆರ್ ರವರ ಭಾಗಕ್ಕೆ ಬಂದಿದೆ ಎಂದರೆ ಸಾಕ್ಷಿಯು ಕ್ರಯಪತ್ರದಲ್ಲಿ ಆ ರೀತಿ ನಮೂದು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಮುಂದುವರೆದು, ಕ್ರಯಪತ್ರದ ಕಾಲಕ್ಕೆ 3 ಕೊಠಡಿಗಳು ನಶಿಸಿಹೋಗಿದ್ದು ಉಳಿದಿದ್ದ 3 ಕೊಠಡಿಗಳ ಕಟ್ಟಡವನ್ನು ನನ್ನ ಕ್ರಯಪತ್ರದಲಿ ನಮೂದಿಸಿದ್ದಾರೆ ಎಂದು ನುಡಿಯುತ್ತಾರೆ. 3 ಕೊಠಡಿಗಳ ಕಟ್ಟಡ ನಶಿಸಿಹೋಗಿತ್ತು ಎಂದರೆ ಸುಳ್ಳು ಎಂದರೆ ಸರಿಯಲ್ಲ.

3. ನಿಪಿ-4 ರಿಂದ 6 ಫೋಟೋಗಳಲ್ಲಿ ದಿನಾಂಕ ಮತ್ತು ಸಮಯ ಕಂಡುಬರುತ್ತಿಲ್ಲ ಎಂದರೆ ಸಾಕ್ಷಿಯು ನಾನು ಮೊಬೈಲಿನಿಂದ ತೆಗೆದಿದ್ದು ಎಂದು ನುಡಿಯುತ್ತಾರೆ. ಸದರಿ ಫೋಟೋಗಳು ಡಿಕ್ರಿ ಷೆಡ್ಯೂಲ್ ಆಸ್ತಿಗೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. ಅಂತಹ ಫೋಟೋಗಳನ್ನು ನಾನು ತೆಗೆದು, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ